

ಸಂಪಾದಕೀಯ

# ಬೆಳಕ ಬೀರುವ ಹಾದಿ

## ಭಾಗ ೨

ಪ್ರಪಂಚದಲ್ಲಿ ಧರ್ಮಗಳ ಉಗಮ, ಮಹಾಪುರುಷರ ಹಾಗೂ ದೈವೀ ವ್ಯಕ್ತಿತ್ವಗಳ ಆವಿರ್ಭಾವ ಹೇಗೆ ಅಲೌಕಿಕ ಸತ್ಯ ಹಾಗೂ ಅದರ ಅನುಭವದಲ್ಲೇ ಕೇಂದ್ರಿತವಾಗಿತ್ತು ಎಂಬ ವಿಷಯ ವನ್ನು ಹಿಂದಿನ ಸಂಚಿಕೆಯಲ್ಲಿ ಗಮನಿಸಿದೆವು. ಇಂಥ ಅಲೌಕಿಕ ಅನುಭವಗಳ ಸ್ವರೂಪವೇನು? ಅದರ ವ್ಯಾಪಕತೆ, ಪ್ರಪಂಚದಲ್ಲಿ ಅದರ ಪ್ರಭಾವ, ಮಾನವನ ಜೀವನದ ಮೇಲೆ ಅದು ಮಾಡಿದ ಪ್ರಭಾವ – ಈ ವಿಷಯಗಳನ್ನು ಕುರಿತು ಇಲ್ಲಿ ಚರ್ಚಿಸೋಣ:

### ಆಧ್ಯಾತ್ಮಿಕ ಮಹಾಪುರುಷರ ಅಲೌಕಿಕ ಅನುಭವ

ಜಗತ್ತಿನ ಧರ್ಮಗಳಲ್ಲೆಲ್ಲ ಬಹಳ ಪ್ರಾಚೀನ ಕಾಲದಿಂದಲೇ ಅನೇಕ ಮಂದಿ ಮಹಾಪುರುಷರು ಆಗಿಹೋಗಿದ್ದಾರೆ. ಅವರಲ್ಲಿ ಧರ್ಮಸಂಸ್ಥಾಪಕರು, ಅವರ ಒಡನಾಡಿಗಳು, ಇನ್ನಿತರ ಸಮ ಕಾಲೀನ ಸಾಧಕರು ಹಾಗೂ ಮುಂದೆ ವಿವಿಧ ಕಾಲಘಟ್ಟಗಳಲ್ಲಿ ಆಗಿಹೋದ ಸಾಧು-ಸಂತರುಗಳು ತಮ್ಮ ಅಸಾಧಾರಣ ಆಧ್ಯಾ ತ್ಮಿಕ ಅನುಭವಗಳಿಂದಲೇ ಜನರ ಶ್ರದ್ಧೆ, ಗೌರವಗಳಿಗೆ ಪಾತ್ರರಾದು ದನ್ನು ನಾವು ಕಾಣುತ್ತೇವೆ. ಈ ಅನುಭವಗಳು ಈ ವ್ಯಕ್ತ ಪ್ರಪಂಚ ವನ್ನು ಮೀರಿದ್ದೂ, ಇಂದ್ರಿಯಗಳಿಗೆ ಅಗೋಚರವಾದ ಬೇರೆಯೇ ಒಂದು ನೆಲೆಗೆ ಸೇರಿದ್ದೂ ಆಗಿತ್ತೆಂದು ಅವರ ಅನುಭವಗಳ ವಿವ ರಣೆಗಳಿಂದ ತಿಳಿದುಬರುತ್ತದೆ. ಭಾರತದಲ್ಲಿ ಇಂತಹ ಮಹಾತ್ಮರ ದೊಡ್ಡ ಪರಂಪರೆ ಅನಾದಿಕಾಲದಿಂದ ಇತ್ತೀಚಿನವರೆಗೂ ಮುಂದು ವರಿದುಕೊಂಡು ಬಂದಿತು. ಇವರಲ್ಲೂ ಹಲವು ಶ್ರೇಣಿಯ, ವಿಭಿನ್ನ ಆಧ್ಯಾತ್ಮಿಕ ಸ್ತರಗಳ ಮಹಾತ್ಮರು ಕಂಡುಬರುತ್ತಾರೆ. ಈ ಕುರಿತು ಸ್ವಾಮಿ ಶಾರದಾನಂದರು ಹೇಳುತ್ತಾರೆ: ''ಭಗವಂತನ ದರ್ಶನದ ಮೇಲೆಯೇ ಭಾರತದ ಧರ್ಮ ಪ್ರತಿಷ್ಠಿತವಾಗಿದೆ ಎಂಬುದನ್ನು ಸಹಜವಾಗಿಯೇ ಊಹಿಸಬಹುದು. ವೈದಿಕ ಕಾಲದಿಂದಲೂ ಧರ್ಮಸಂಸ್ಥಾಪಕರಾದ ಆಚಾರ್ಯರು – ಋಷಿ, ಆಪ್ತ, ಅಧಿ ಕಾರಿ, ಪ್ರಕೃತಿಲೀನ ಪುರುಷ ಮುಂತಾದ ಹೆಸರಿನಿಂದ ಕರೆಯಲ್ಪಟ್ಟಿ ದ್ದಾರೆ. ಇದರಿಂದಲೇ ಮೇಲಿನ ಮಾತು ಸ್ಪಷ್ಟವಾಗುತ್ತದೆ. ಇವರೆಲ್ಲ ಇಂದ್ರಿಯಾತೀತ ವಸ್ತುವನ್ನು ಸಾಕ್ಷಾತ್ಕರಿಸಿಕೊಂಡು ಅಸಾಧಾರಣ ಶಕ್ತಿಯನ್ನು ಪಡೆದಿದ್ದುದ್ದರಿಂದಲೇ ಇವರು ಈ ಮೇಲಿನ ಹೆಸರು ಗಳಿಂದ ಕರೆಯಲ್ಪಟ್ಟಿದ್ದಾರೆ. ವೈದಿಕ ಕಾಲದ ಋಷಿಗಳಿಂದ ಹಿಡಿದು ಪುರಾಣಯುಗದ ಅವತಾರಪುರುಷರೆಲ್ಲರಿಗೂ ಈ ಮಾತು ಸಮಾನ ವಾಗಿ ಅನ್ವಯಿಸುತ್ತದೆ... ಅವರಲ್ಲಿ ಕೆಲವರು ಆಧ್ಯಾತ್ಮಿಕ ಜಗತ್ತಿನ ಸೂರ್ಯನಂತಿದ್ದರೆ, ಇನ್ನು ಕೆಲವರು ಚಂದ್ರನಂತೆ, ಮತ್ತೆ ಕೆಲ ವರು ನಕ್ಷತ್ರ ಸಮಾನರು, ಇನ್ನು ಕೆಲವರು ಸಾಮಾನ್ಯ ದೀಪ ವಿದ್ದಂತೆ...'' *(ಶ್ರೀರಾಮಕೃಷ್ಣ ಲೀಲಾಪ್ರಸಂಗ, ಸಂ.೧, ಪು.೨)* ವೈದಿಕ ಕಾಲದಲ್ಲಿ ಮಹಾತ್ಮರ ಈ ಶಕ್ತಿ-ಸಾಮರ್ಥ್ಯಗಳಲ್ಲಿನ ತಾರತಮ್ಯ ತಿಳಿಯದೆ, ಎಲ್ಲರನ್ನು 'ಋಷಿ'ಗಳೆಂದೇ ಕರೆದರೆಂದೂ, ಮುಂದೆ ಪುರಾಣಗಳ ಕಾಲದಲ್ಲಿ ಅವತಾರ ಪುರುಷರು ಆಧ್ಯಾತ್ಮಿಕತೆಯಲ್ಲಿ ಎಲ್ಲರನ್ನೂ ಮೀರಿದವರಾಗಿದ್ದರು ಎಂಬುದು ತಿಳಿದುಬಂತೆಂದೂ ಇಲ್ಲಿ ಹೇಳುತ್ತಾರೆ. ಕೇವಲ ಭಾರತದ ಮಹಾಪುರುಷರನ್ನು ಕುರಿತು ಹೇಳಿರುವ ಈ ವಿಷಯಗಳು ಪ್ರಪಂಚದ ಇತರ ಆಧ್ಯಾತ್ಮಿಕ ಮಹಾಪುರುಷರಿಗೂ ಅನ್ವಯಿಸುತ್ತವೆ. ಅವರ ತಾರತಮ್ಯ, ಶಕ್ತಿ ಭೇದ ಹಾಗೂ ಮಹಿಮಾತಿಶಯಗಳನ್ನು ಅರಿತುಕೊಳ್ಳುವುದು ಅಂಥ ಅನುಭವವನ್ನು ಪಡೆದವರಿಗೆ ಮಾತ್ರ ಶಕ್ಯವೆಂಬುದನ್ನಿಲ್ಲಿ ನಾವು ಮರೆಯಬಾರದು.

### ಆಧ್ಯಾತ್ಮಿಕ ಅನುಭವಗಳ ಅನಿರ್ವಚನೀಯತೆ

ದಿವ್ಯ ವ್ಯಕ್ತಿತ್ವವನ್ನು ಹೊಂದಿದ್ದ ಮಹಾಪುರುಷರು ಪಡೆದ ಅಲೌಕಿಕ ಅನುಭವಗಳಾದರೂ ಎಂಥವು? ಅವುಗಳನ್ನು ಅವರು ಹೇಗೆ ವಿವರಿಸಿದ್ದಾರೆ? ನಾವು ಅವುಗಳನ್ನು ಹೇಗೆ ಅರ್ಥೈಸಿಕೊಳ್ಳ ಬೇಕು? — ಇಂಥ ಪ್ರಶ್ನೆಗಳಿಲ್ಲಿ ಮೂಡುವುದು ಸಹಜ. ಇಲ್ಲಿ ಅಪರಿಹಾರ್ಯವಾದ ಒಂದು ಸಮಸ್ಯೆಯನ್ನು ನಾವು ಗಮನಿಸ ಬೇಕು. ಮಹಾಪುರುಷರೆಲ್ಲ ತಮಗಾದ ದಿವ್ಯ ಅನುಭವಗಳು ಅಗಾಧವೂ, ಅಸಾಧಾರಣವೂ ಈ ಲೋಕವನ್ನು ಮೀರಿದ್ದೆಂದೂ ಹೇಳುತ್ತಾರೆ; ಅವುಗಳ ದಿವ್ಯಸ್ಮೃತಿ, ಅಚ್ಚಳಿಯದ ಮುದ್ರೆ ಅವರ ಚಿತ್ತದಲ್ಲಿ ಚಿರಕಾಲವೂ ಉಳಿಯುವಂತೆ ವರ್ಣಿಸುತ್ತಾರೆ. ಆದರೆ, ನಿಜವಾಗಿಯೂ ಅವರಿಗೆ ಆದ ಅನುಭವ, ದರ್ಶನ ಎಂಥದು? –

ಇದನ್ನು ಮಾತ್ರ ಸ್ಪಷ್ಟವಾಗಿ ವಿವರಿಸಲಾರರು. ಹೆಚ್ಚೆಂದರೆ 'ಅಗಮ್ಯ' 'ಅಗೋಚರ' ವೆಂದೂ 'ಅನಿರ್ವಚನೀಯ' – ಎಂದರೆ ಮಾತಿಗೆ ನಿಲುಕದ್ದು, ಹಾಗಾಗಿ ವಿವರಿಸಲಾಗದ್ದೆಂದೂ ಹಲವೆಡೆ ಹೇಳಿದ್ದಿದೆ. ಇದರರ್ಥ, ದಿವ್ಯಾನುಭವ ಯಾರಿಗೆ ಆಗಿದೆಯೋ ಅವರಿಗೆ ಮಾತ್ರ ಅದು ಅರ್ಥವಾಗುವುದು. ಅದನ್ನು ಮಾತಿನ ಮೂಲಕ, ಮನಸ್ಸು-ಬುದ್ಧಿಗಳ ಮೂಲಕ ವಿವರಿಸಲಾಗುವುದಿಲ್ಲ. ಏಕೆಂದರೆ, ಆ ಅನುಭವ ಮನಸ್ಸು-ಬುದ್ಧಿ-ಭಾಷೆಗಳ ಹಾಗೂ ಪ್ರಾಪಂಚಿಕ ಗ್ರಹಿಕೆಯನ್ನೇ ಮೀರಿದ ಒಂದು ಉಚ್ಚ ಸ್ತರದ ಸ್ಥಿತಿ. ಅದನ್ನು ವರ್ಣಿಸಲಾಗದ ಕಾರಣ, ಅದರ ಅನುಭವವಾಗದವರಿಗೆ ಅದು ಅರ್ಥವಾಗುವಂತಿಲ್ಲ. ಅಂದರೆ, ಆಧ್ಯಾತ್ಮಿಕ ಅನುಭವವನ್ನು ಕುರಿತು ನಾವು ತಿಳಿದುಕೊಳ್ಳುವುದೆಲ್ಲ ಕೇವಲ ಊಹೆ, ಕಲ್ಪನೆ ಎಂದಷ್ಟೇ ಎಂದಂತಾಗುವುದು. ಇದನ್ನು ಕುರಿತು ಶ್ರೀರಾಮಕೃಷ್ಣರಿಗೆ ಸಂಬಂಧಿಸಿದ ಘಟನೆಯೊಂದಿದೆ. ಸಮಾಧಿ ಎಂದರೆ ಆಧ್ಯಾತ್ಮಿಕ ಅನುಭವಗಳಲ್ಲೆಲ್ಲ ಅತ್ಯುನ್ನತವಾದ ಹಂತ. ಅಂಥ ಅವಸ್ಥೆಯಲ್ಲಾಗುವ ಅನುಭವವನ್ನು ಕುರಿತು ವಿವರಿಸಲು ಶ್ರೀರಾಮಕೃಷ್ಣರ ಶಿಷ್ಯರೆಲ್ಲ ಅವರನ್ನು ಒತ್ತಾಯಿಸಿದರು. ಒಂದು ಸಲ ಅವರು ಹೀಗೆಂದರು, ''ಇಂದು ನಿಮಗೆ ಎಲ್ಲ ಹೇಳಿಬಿಡುತ್ತೇನೆ, ಏನನ್ನೂ ಬಚ್ಚಿಡುವುದಿಲ್ಲ.'' ಹೀಗೆ ಅವರು ಪರಮಾತ್ಮನ ದರ್ಶನವನ್ನು ಕುರಿತು ಹೇಳತೊಡಗುತ್ತಿದ್ದಂತೆಯೇ ಸಮಾಧಿಸ್ಥರಾಗಿಬಿಟ್ಟರು! ಆ ಹಂತದಿಂದ ಸಾಮಾನ್ಯ ಹಂತಕ್ಕೆ ಇಳಿದು ಬಂದ ಮೇಲೆ ಅವರು ತಮ್ಮ ಅಸಹಾಯಕತೆಯನ್ನು ತೋರ್ಪಡಿಸುತ್ತ, ''ತಾಯಿ ನನ್ನನ್ನು ಹೇಳಲು ಬಿಡುವುದಿಲ್ಲ'' ಎಂದರು. ''ಮಾತುಕತೆ ನಡೆಯುವುದು ಮನಸ್ಸು, ಬುದ್ಧಿಗಳ ಸಹಾಯದಿಂದ. ಅವು ಬಹುದೂರ ಹೋಗುವುದಿಲ್ಲ. ಆದ್ದರಿಂದಲೇ ಪರಮಹಂಸರು ಅದನ್ನು ವರ್ಣಿಸ ಲಾಗಲಿಲ್ಲ'' ಎನ್ನುತ್ತಾರೆ ಸ್ವಾಮಿ ಶಾರದಾನಂದರು. *(ಲೀಲಾಪ್ರಸಂಗ, ಸಂ.೧, ಪು. ೪೦೫)* ಈ ಮಿತಿಯನ್ನು ಗಮನದಲ್ಲಿಟ್ಟುಕೊಂಡೇ ಆಧ್ಯಾತ್ಮಿಕ ವ್ಯಕ್ತಿಗಳ ಅಲೌಕಿಕ ಅನುಭವಗಳನ್ನು ಅರ್ಥಮಾಡಿಕೊಳ್ಳಲು ಯತ್ನಿಸಬೇಕು.

## ದಿವ್ಯಾನುಭವಗಳು : ವೇದ, ಉಪನಿಷತ್ತುಗಳಲ್ಲಿ

ಈ ಹಿಂದೆಯೇ ನಾವು ನೋಡಿರುವಂತೆ ವೇದಗಳೇ ಜಗತ್ತಿನ ಧಾರ್ಮಿಕ ಮುಂಬೆಳಗಿನಲ್ಲಿ ಮೂಡಿಬಂದ ಮೊದಲ ಬೆಳಕಿನ ರೇಖೆಗಳು. ಅವುಗಳು ಉದಯಿಸಿ ಬಂದುದು ಪ್ರಾಚೀನ ಋಷಿಗಳ ಗಾಢ ಧ್ಯಾನದ ಆಳದಿಂದ, ಕಾವ್ಯಮಯ ಹೃದಯಗರ್ಭದಿಂದ. ವೇದಮಂತ್ರಗಳಲ್ಲಿ ಕಂಡುಬರುವ ಉಪಾಸನೆ, ಸ್ತುತಿರೂಪದ ಸೂಕ್ತಗಳಲ್ಲಿ ಅಲ್ಲಲ್ಲಿ ಪಾರಮಾರ್ಥಿಕ ದಿವ್ಯಾನುಭವದ ಮಿಂಚುಗಳು ಕಂಡುಬರುತ್ತವೆ. ಮಾತು, ಮನಸ್ಸಿಗೆ ನಿಲುಕದ ಅತೀತದ ಅನುಭವದ ಮಿಂಚುಗಳ ಸ್ಮೃತಿಯೊಂದೇ ಅಲ್ಲಿ ಅಚ್ಚರಿಯ ಧನ್ಯತೆಯಾಗಿ ಮಡುಗಟ್ಟಿ ನಿಲ್ಲುತ್ತದೆ : ''ಮಹಿಮಾವಂತನಾದ ಆ ದಿವ್ಯಪುರುಷನನ್ನು ನಾನು ಅರಿತೆನು. ಅವನು ಸೂರ್ಯನಂತೆ ಪ್ರಜ್ವಲನೂ, ಎಲ್ಲ ಕತ್ತಲೆಯನ್ನು ದಾಟಿದವನೂ ಆಗಿದ್ದಾನೆ... ಅವನನ್ನು ಅರಿತುಕೊಂಡ ಜ್ಞಾನಿಯು ಅಮೃತತ್ತ್ವವನ್ನು ಹೊಂದುತ್ತಾನೆ. ಇದಕ್ಕೆ ಬೇರೊಂದು ಮಾರ್ಗವೇ ಇಲ್ಲ.'' *(ಪುರುಷಸೂಕ್ತ, ೭)*

ಆದರೆ, ವೇದಗಳಲ್ಲಿ ಉದ್ದಕ್ಕೂ ಕಂಡುಬರುವುದು ಪಾರಮಾರ್ಥಿಕ ಸತ್ಯದ ನಿರಂತರ ಅನ್ವೇಷಣೆ. ವಿವಿಧ ದೇವತೆಗಳ, ವಿವಿಧ ಶಕ್ತಿಗಳ ಉಪಾಸನೆ, ಆರಾಧನೆ ಅಲ್ಲಿ ನಡೆಯುತ್ತದೆ; ಮಾತು-ಬುದ್ಧಿಗಳಾಚೆಗೆ ಅವ್ಯಕ್ತ ರೂಪದಿಂದಿದ್ದು ಮರೆಯಾಗಿರುವ ಸತ್ಯವನ್ನು ಕಂಡುಕೊಳ್ಳಲು ಮಾನವನು ನಡೆಸಿದ ಅವಿರತ ಪ್ರಯತ್ನ, ಹೋರಾಟ, ಛಲ, ತಪಸ್ಸುಗಳನ್ನಿಲ್ಲಿ ಕಾಣಬಹುದು. ಸತ್ಯಾನ್ವೇಷಣೆಯಲ್ಲಿ ಅವನಿಗಿದ್ದ ಶ್ರದ್ಧೆ, ಸತ್ಯದರ್ಶನಕ್ಕಾಗಿ ಅವನಲ್ಲಿದ್ದ ಕಾತರತೆ ಅವನನ್ನು ಮುಂದಕ್ಕೆ ಕೊಂಡೊಯ್ದಿತು. ವೇದಗಳ ಕೊನೆಯ ಭಾಗಗಳಲ್ಲಿ (ಇವೇ 'ಉಪನಿಷತ್' ಎನಿಸಿಕೊಳ್ಳುತ್ತವೆ.) ದಾಖಲಾಗಿರುವ ವಿವಿಧ ಅನುಭವಗಳೆಲ್ಲವೂ ಅವರ ಅನ್ವೇಷಣೆಯ ಫಲ. ಆಧ್ಯಾತ್ಮಿಕ ಅನುಭೂತಿಯ ವಿವರಣೆಗಳು ನಮಗೆ ಸ್ಪಷ್ಟವಾಗಿ ದೊರಕುವುದು ಇಲ್ಲೇ.

ಉಪನಿಷತ್ತುಗಳಲ್ಲಿ ವರ್ಣಿತವಾಗಿರುವ ದಿವ್ಯಾನುಭವಗಳ ನಿರೂಪಣೆ ಸರಳ ಹಾಗೂ ಸುಂದರ; ಆದರೆ ಆ ಅನುಭವಗಳ ಆಳ ಅಳೆಯಲಾಗದ್ದು. ಅನಿರ್ವಚನೀಯ ಅನುಭವಗಳನ್ನು ಮಾತಿನ ಮೂಲಕ ಹಿಡಿದಿಡಲಾಗದು. ಇದರ ಅರಿವಿದ್ದೂ ಉಪನಿಷತ್ತುಗಳು ಈ ಸಾಹಸಕ್ಕೆ ಕೈ ಹಾಕುತ್ತವೆ. ''ಅಲ್ಲಿಗೆ ಕಣ್ಣು, ಮಾತು, ಮನಸ್ಸು ಹೋಗುವುದಿಲ್ಲ. ಆ ಸತ್ಯ ಹೇಗಿದೆಯೆಂಬುದನ್ನು ನಾವು ಅರಿಯೆವು. ಅದನ್ನು ಹೇಗೆ ತಿಳಿಸಿಕೊಡಬೇಕೋ ತಿಳಿಯಲಾರೆವು'' *(ಕೇನೋಪನಿಷತ್ತು, ೧.೩)* ಎಂದು ಹೇಳುತ್ತಲೇ ಮುಂದೆ, ''ಮಿಂಚಿನ ಹೊಳಪಿನಂತೆ, ಕಣ್ಣುಮಿಟುಕಿಸಿದಂತೆ ಈ ಸತ್ಯವು ಕ್ಷಿಪ್ರವಾಗಿ ತೋರಿ ಮಾಯವಾಗುತ್ತದೆ'' ಎನ್ನಲಾಗಿದೆ *(ಅಲ್ಲೇ, ೪.೪).* ಅಗೋಚರ ಸತ್ಯವನ್ನು ವರ್ಣಿಸುವಾಗ ಅನೇಕ ವೇಳೆ ಉಪಮೆ, ರೂಪಕಗಳಿಂದ ಕೂಡಿದ ವಿವರಣೆ ಕಂಡುಬರುತ್ತದೆ (ಮೇಲಿನ ಉದಾಹರಣೆಯಲ್ಲಿರುವಂತೆ). ಇನ್ನು, ಅನೇಕ ಕಡೆ ವಿರುದ್ಧ ಸಂಗತಿಗಳನ್ನು ಒಂದೆಡೆ ತಂದು ಜೋಡಿಸುತ್ತಾರೆ: ''ಅದು ಚಲಿಸುತ್ತದೆ; ಆದರೆ ಚಲಿಸುವುದಿಲ್ಲ. ಅದು ಅತ್ಯಂತ ದೂರದಲ್ಲಿದೆ; ಆದರೆ ಅತ್ಯಂತ ಹತ್ತಿರವಿದೆ. ಅದು ಎಲ್ಲದರ ಒಳಗೂ ಇದೆ, ಹೊರಗೂ ಇದೆ'' *(ಈಶೋಪನಿಷತ್ತು, ೫).* ''ಆ ಬ್ರಹ್ಮವು ಅಣುವಿಗಿಂತ ಅಣುವಾಗಿಯೂ, ಅತಿದೊಡ್ಡ ವಸ್ತುವಿಗಿಂತ ಇನ್ನೂ ದೊಡ್ಡದಾಗಿಯೂ ಇದೆ.'' *(ಕಠೋಪನಿಷತ್ತು, ೧.೨.೨೦).*

ಉಪನಿಷತ್ತುಗಳಲ್ಲಿ ಕಂಡುಬರುವ ದಿವ್ಯಾನುಭವಗಳ ಸ್ವರೂಪವನ್ನು ಹೀಗೆ ಸಮೀಕರಿಸಿ ಹೇಳುತ್ತಾರೆ: **ಸತ್**(ಇರುವಿಕೆ, ಅಸ್ತಿತ್ವ), **ಚಿತ್**(ಪ್ರಜ್ಞೆ, ಅರಿವು) ಹಾಗೂ **ಆನಂದ** (ದಿವ್ಯಾನುಭವದ ಅಮಿತ ಆನಂದ). ಈ 'ಸತ್-ಚಿತ್-ಆನಂದ' ವೆಂಬ ಮೂರು ಲಕ್ಷಣಗಳು ಉಪನಿಷತ್ತುಗಳಲ್ಲಿ ಒಂದೆಡೆ ಒಂದೇ ಮಾತಿನಲ್ಲಿ ಕಂಡುಬರುವುದಿಲ್ಲ; ಆದರೆ ವಿವಿಧ ಉಪನಿಷತ್ತುಗಳಲ್ಲಿ ಕಾಣಿಸುವ ಆತ್ಮನ ಲಕ್ಷಣಗಳ ಸಾರವೇ ಇದಾಗಿದೆ. ತೈತ್ತಿರೀಯ ಉಪನಿಷತ್ತಿನಲ್ಲಿ 'ಸತ್ಯಂ ಜ್ಞಾನಮನಂತಂ ಬ್ರಹ್ಮ' ಎಂದೂ, ಬೃಹದಾರಣ್ಯಕೋಪನಿಷತ್ತಿನಲ್ಲಿ 'ವಿಜ್ಞಾನಮಾನಂದಂ ಬ್ರಹ್ಮ' ಎಂದೂ ಹೇಳಲಾಗಿದೆ. ಈ ಮೂರು ಲಕ್ಷಣಗಳನ್ನೇ ಇನ್ನೊಂದು ರೀತಿಯಲ್ಲಿ 'ಅಸ್ತಿ-ಭಾತಿ-ಪ್ರಿಯಂ' (ಇರುತ್ತದೆ, ಬೆಳಗುತ್ತದೆ, ಪ್ರಿಯವಾಗಿದೆ)

ಎಂದೂ ಹೇಳುತ್ತಾರೆ. ಇಡೀ ವಿಶ್ವದ ಮೂಲ ನಿಯಮಗಳಿವು. ಪ್ರತಿಯೊಂದು ವಸ್ತುವೂ, ಪ್ರತಿಯೊಂದು ಜೀವಜಾಲವೂ ಈ ಮೂರು ಲಕ್ಷಣಗಳಿಂದಲೇ ನಿರ್ಮಿತವಾಗಿವೆ; ಅಂತಿಮವಾಗಿ ಅವುಗಳಲ್ಲೇ ಲಯಹೊಂದುತ್ತವೆ. ಯಾರು ಈ ಸತ್ಯವನ್ನು ಅರಿತಿದ್ದಾನೋ ಅವನಿಗೆ ಈ ಪ್ರಪಂಚವೆಲ್ಲವೂ ಆ ಸತ್ಯದ ಅಭಿವ್ಯಕ್ತಿಯಾಗಿ ಕಂಡುಬರುತ್ತದೆ.

ದಿವ್ಯಾನುಭವವನ್ನು ಪಡೆದವನಿಗೆ ಏನಾಗುತ್ತದೆ? ೧) ಅವನು ಮುಂದೆ ಏನನ್ನೂ ಬಯಸುವುದಿಲ್ಲ, ಯಾವ ಕಾರಣದಿಂದಲೂ ಶೋಕಿಸುವುದಿಲ್ಲ.('ನ ಶೋಚತಿ ನ ಕಾಂಕ್ಷತಿ') ಏಕೆಂದರೆ ಅವನು ಪರಿಪೂರ್ಣತೆಯನ್ನು ಹೊಂದುತ್ತಾನೆ; ಪೂರ್ಣ ತೃಪ್ತಿಯನ್ನು ಹೊಂದುತ್ತಾನೆ. ಅವನು ಹೊಂದಬೇಕಾದದ್ದೇನೂ ಉಳಿದಿರುವುದಿಲ್ಲ. ೨) ಅವನು ಮೃತ್ಯುವನ್ನು ದಾಟಿ ಹೋಗುತ್ತಾನೆ, ಮರಣವೇ ಇಲ್ಲದ ಸ್ಥಿತಿಯನ್ನು ಹೊಂದಿ ಅಮರನಾಗುತ್ತಾನೆ. ೩) ಅವನ ದೇಹ ಜೀವಂತವಿರುವವರೆಗೂ ಅವನು ಜಗತ್ತಿನ ಏರುಪೇರುಗಳಿಗೆ ನಿರ್ಲಿಪ್ತನಾಗಿರುತ್ತಾನೆ. ಬಾಹ್ಯಜಗತ್ತಿನ ದ್ವಂದ್ವಗಳು ಅವನನ್ನು ಬಾಧಿಸಲಾರವು. ೪) ಅವನಿಗೆ ಎಲ್ಲ ಜ್ಞಾನವೂ ಬಂದೊದಗುತ್ತದೆ. ಏಕೆಂದರೆ, ಅವನ ದಿವ್ಯದೃಷ್ಟಿ ತೆರೆಯಲ್ಪಡುವುದು. ಅವನು ಆ ಪರಮಸತ್ಯವಾದ ಬ್ರಹ್ಮದಲ್ಲಿ ಒಂದಾಗುತ್ತಾನೆ.

ಹೀಗೆ ವೇದಗಳಲ್ಲಿ ಅವ್ಯಕ್ತ ತತ್ತ್ವದ, ಅಗೋಚರ ಸತ್ಯದ ಅನ್ವೇಷಣೆಯಿದೆ, ಆ ಸತ್ಯದ ಇರುವಿಕೆಯಲ್ಲಿ ಅಸಾಧಾರಣ ನಂಬಿಕೆಯಿದೆ. ಮುಂದೆ ತಪಸ್ಸು, ಧ್ಯಾನ, ಸಾಧನೆಗಳಿಂದ ಅಂತಹ ಸತ್ಯದ ದಿವ್ಯದರ್ಶನವಾಗುವುದು; ಇಂಥ ಆಧ್ಯಾತ್ಮಿಕ ಅನುಭವದಲ್ಲೇ ಮಾನವನ ಜೀವನದ ಸಾರ್ಥಕತೆ ಎಂಬ ಸಂದೇಶವೂ ಇಲ್ಲಿದೆ. ಇಂಥ ದಿವ್ಯಾನುಭವವನ್ನು ಹೊಂದಬೇಕಾದರೆ ಮಾರ್ಗವೇನು? ಉಪನಿಷತ್ತುಗಳಲ್ಲಿ ಇದನ್ನು ಹಲವು ರೀತಿಯಲ್ಲಿ ವಿವರಿಸಲಾಗಿದೆ. ಭಾರತೀಯ ಧಾರ್ಮಿಕ ಇತಿಹಾಸದಲ್ಲಿ ಮುಂದೆ ಕಂಡುಬರುವ ಅನೇಕ ದರ್ಶನಗಳಿಗೂ, ದ್ವೈತ-ಅದ್ವೈತ-ವಿಶಿಷ್ಟಾದ್ವೈತವೇ ಮೊದಲಾದ ತತ್ತ್ವಗಳಿಗೂ, ಶೈವ-ವೈಷ್ಣವ- ಸ್ಮಾರ್ತ-ಗಾಣಾಪತ್ಯವೇ ಮೊದಲಾದ ಸಂಪ್ರದಾಯಗಳಿಗೂ ಉಪನಿಷತ್ತುಗಳಲ್ಲಿನ ಈ ಸಾಧನಕ್ರಮಗಳೇ ದಾರಿ ಮಾಡಿಕೊಟ್ಟವು ಎಂಬುದು ಇಲ್ಲಿ ಗಮನಿಸಬೇಕಾದ ಪ್ರಧಾನ ಸಂಗತಿಯಾಗಿದೆ.

### ದಿವ್ಯಾನುಭವ: ತಾರ್ಕಿಕ ಜಿಜ್ಞಾಸೆ

ಮಾನವನು ತನ್ನ ಗ್ರಹಿಕೆಗೆ ನಿಲುಕುವ ಪ್ರತಿಯೊಂದನ್ನೂ ಪರೀಕ್ಷೆಗೆ ಒಡ್ಡುತ್ತಾನೆ. ತರ್ಕದ, ವಿಚಾರದ ಮೂಸೆಯಲ್ಲಿ ತನ್ನ ಪ್ರತಿಯೊಂದು ಅನುಭವವನ್ನೂ ಒರೆಗೆ ಹಚ್ಚುತ್ತಾನೆ. ಇದು ಭಾರತದಲ್ಲೂ ನಡೆಯಿತು, ಪಾಶ್ಚಾತ್ಯದೇಶಗಳಲ್ಲೂ ನಡೆಯಿತು. ನಮ್ಮಲ್ಲಿ ದೈವೀ ಅನುಭವಗಳನ್ನು ಸಾರಾಸಗಟಾಗಿ ತಿರಸ್ಕರಿಸಿದ ಚಾರ್ವಾಕರಂಥವರೂ ಇದ್ದರು; ಆತ್ಮನ ಅಸ್ತಿತ್ವವನ್ನೊಪ್ಪದ ಬೌದ್ಧರಂಥವರೂ ಇದ್ದರು. ಸಾಂಖ್ಯ, ಯೋಗ, ವೈಶೇಷಿಕವೇ ಮೊದಲಾದ ಆಸ್ತಿಕ ದರ್ಶನಗಳಲ್ಲೂ ಆತ್ಯಂತಿಕ ಸತ್ಯದ, ದಿವ್ಯಾನುಭವದ ವಿಚಾರ ಬರುತ್ತದೆ; ಅದು ತರ್ಕದ ಪರೀಕ್ಷೆಗೊಳಗಾಗುತ್ತದೆ. ಆದರೆ ನಮ್ಮ ದೇಶದಲ್ಲಿ ಇದಕ್ಕೆ ಜೊತೆಜೊತೆಯಾಗಿ ಅವತಾರ ಪುರುಷರ, ಋಷಿಮುನಿಗಳ, ಸಾಧುಸಂತರುಗಳ ಉಜ್ವಲ ಪರಂಪರೆ ಬೆಳೆದು ಬಂದುದು, ಅವರ ದಿವ್ಯಜೀವನ ಎಲ್ಲ ದಾರ್ಶನಿಕ ಪಂಥಗಳ ವಿದ್ವಾಂಸರನ್ನು ಪ್ರಭಾವಿಸಿದುದು ವಿಶೇಷ. ಇದರಿಂದ ನಮ್ಮಲ್ಲಿ ತಾರ್ಕಿಕ ಪಂಥಗಳೆಲ್ಲ ಆಧ್ಯಾತ್ಮಿಕ ಅನುಭವಗಳಿಗೆ ಹಾಗೂ ದೈವೀ ವ್ಯಕ್ತಿತ್ವಗಳಿಗೆ ಉನ್ನತ ಸ್ಥಾನವನ್ನು ಕೊಟ್ಟಿದ್ದುದನ್ನು ಕಾಣುತ್ತೇವೆ. ಎಲ್ಲ ತರ್ಕಗಳ ಸಿದ್ಧಾಂತದಲ್ಲಿ ದೈವೀಪುರುಷರ ವಾಣಿಗೆ (ಇದೇ 'ಶ್ರುತಿ') ವಿಶೇಷ ಸ್ಥಾನವಿದ್ದುದನ್ನು ಇಲ್ಲಿ ಗಮನಿಸಬೇಕು.

ಪಾಶ್ಚಾತ್ಯ ದೇಶಗಳಲ್ಲಿ ತಾರ್ಕಿಕ ಜಿಜ್ಞಾಸೆ ಬೇರೆಯೇ ಒಂದು ರೀತಿ ಕವಲೊಡೆಯಿತು. ಧಾರ್ಮಿಕ ಪಂಗಡಗಳ ತರ್ಕ ಒಂದೆಡೆ, ತತ್ತ್ವಜ್ಞಾನಿಗಳ ತರ್ಕ ಇನ್ನೊಂದೆಡೆ, ವೈಜ್ಞಾನಿಕ ಅನ್ವೇಷಕರ ತರ್ಕ ಇನ್ನೊಂದೆಡೆ — ಹೀಗೆ ಒಂದಕ್ಕೊಂದು ಹೊಂದಿಕೆಯಾಗದೆ ಮುಂದುವರಿಯಿತು. ಪ್ರಶ್ನಿಸುವ, ಪರೀಕ್ಷಿಸುವ ಹಾಗೂ ಪ್ರಯೋಗದ ಮೂಲಕವೇ ಸಿದ್ಧಾಂತ ಮಾಡುವ ಪ್ರವೃತ್ತಿ ಅಲ್ಲಿ ಉಳಿದೆಲ್ಲ ತಾರ್ಕಿಕ ಪ್ರವಣತೆಗಳನ್ನೂ ಹಿಂದಿಕ್ಕಿತು. ಇದಕ್ಕೆ ಸರಿಸಮನಾಗಿ ಬೆಳೆದು ಬಂದ ವೈಜ್ಞಾನಿಕ ಬೆಳವಣಿಗೆ, ವಿಚಾರವಾದ, ಗಣಿತ-ಭೌತ-ರಸಾಯನ ಶಾಸ್ತ್ರಗಳ ಪ್ರಗತಿ ಉಳಿದೆಲ್ಲ ತಾರ್ಕಿಕ ಪಂಥಗಳಿಗಿಂತ ಹೆಚ್ಚು ಪ್ರಭಾವ ಬೀರಿತು. ಪರಿಣಾಮವಾಗಿ, ಧಾರ್ಮಿಕ ಅನುಭವ ಹಾಗೂ ಆಧ್ಯಾತ್ಮಿಕ ದಿವ್ಯತೆಯ ಅಸ್ತಿತ್ವವನ್ನು ಅಲ್ಲಗಳೆಯುವವರ ಪ್ರಾಬಲ್ಯವೇ ಹೆಚ್ಚಿತು. ಆದರೆ ಪಾಶ್ಚಾತ್ಯ ದೇಶಗಳಲ್ಲೂ ಕಾಲಕಾಲಕ್ಕೆ ಹಲವು ಮಂದಿ ಸಂತರ, ಧಾರ್ಮಿಕ ಮಹಾವ್ಯಕ್ತಿಗಳ ಆವಿರ್ಭಾವ ಅಲ್ಲಿನ ಧಾರ್ಮಿಕ ಪರಂಪರೆಯಲ್ಲಿ ಕಂಡುಬರುವ ದಿವ್ಯಾನುಭವಗಳಿಗೂ ಜೀವತುಂಬಿ, ಆಯಾ ಧರ್ಮಗಳಲ್ಲಿ ಆಧ್ಯಾತ್ಮಿಕ ಸಾಧನೆ, ಮಾರ್ಗ ಉಳಿಯುವಂತೆ ಮಾಡಿತು.

**'ಯದ್ಯದ್ವಿಭೂತಿ ಮತ್ ಸತ್ವಂ ಶ್ರೀಮದೂರ್ಜಿತಮೇವ ವಾ। ತತ್ತದೇವಾವಗಚ್ಛ ತ್ವಂ ಮಮ ತೇಜೋಽಂಶ ಸಂಭವಮ್'** (ಯಾವ ಯಾವ ವಸ್ತು ವಿಭೂತಿಯುಳ್ಳದ್ದೋ, ಶ್ರೀಯುಕ್ತವೋ ಅಥವಾ ಉತ್ಸಾಹದಿಂದ ಕೂಡಿದೆಯೋ ಅದೆಲ್ಲವೂ ನನ್ನ ತೇಜಸ್ಸಿನ ಒಂದು ಅಂಶದಿಂದ ಉಂಟಾದುದೆಂದು ತಿಳಿದುಕೊ' ಎಂದು ಗೀತೆಯಲ್ಲಿ ಶ್ರೀಕೃಷ್ಣನು ಹೇಳುತ್ತಾನೆ. *(ಗೀತೆ. ೧೦.೪೧)*

ಈ ಅರ್ಥದಲ್ಲಿ ಪ್ರಪಂಚದ ಧಾರ್ಮಿಕ ಇತಿಹಾಸದಲ್ಲಿ ಆದಿಯಿಂದ ಹಿಡಿದು ಇಂದಿನವರೆಗೂ ಮೂಡಿಬಂದ ಹಲವು ಮಂದಿ ದೈವೀಪುರುಷರ, ಸಾಧು-ಸಂತರ, ಮಹಾತ್ಮರ ಹಾಗೂ ಆಧ್ಯಾತ್ಮಿಕ ಸಾಧಕರ ದಿವ್ಯಾನುಭವಗಳೆಲ್ಲ ಸಾಕ್ಷಾತ್ ಭಗವಂತನಿಂದಲೇ ಬಂದವುಗಳು; ಅವುಗಳನ್ನು ಪಡೆಯುವ ಮಾರ್ಗಗಳೂ ಅಂತಿಮವಾಗಿ ಅವನನ್ನೇ ಸೇರಬೇಕು. ಶ್ರೀರಾಮಕೃಷ್ಣರು ಹೇಳುವಂತೆ, 'ಎಷ್ಟು ಮತಗಳೋ, ಅಷ್ಟು ಪಥಗಳು'. ಈ ಅರ್ಥದಲ್ಲಿ ಜಗತ್ತಿನ ಪ್ರತಿಯೊಂದು ಧರ್ಮವೂ ಅದೇ ಭಗವಂತನನ್ನು ಸೇರಲು ಇರುವ ಮಾರ್ಗ. ಈ ಮಾರ್ಗದಲ್ಲಿ ದೀಪವಾಗಿ ನಿಂತವರೇ ಅವತಾರ ಪುರುಷರು. ಅವರ ಅಲೌಕಿಕ ಅನುಭವಗಳೇ ಆ ದೀಪದಿಂದ ಹೊರಸೂಸುವ ಬೆಳಕಿನ ಕಿರಣಗಳು. *(ಮುಂದಿನ ಸಂಚಿಕೆಗೆ)*